620(508) ಶ್ರೀ ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2001–02, 2002–03 ಮತ್ತು 2003–04ನೇ ವರ್ಷದಲ್ಲಿ ಕೃಷಿ ವಿಮೆಗೆ ಜಮಾ ಆಗಿರುವ ಪ್ರಿಮಿಯಂ ಮೊತ್ತ ಎಷ್ಟು (ವರ್ಷಾವಾರು ವಿವರ ನೀಡುವುದು);

ಆ) ಮೇಲ್ಕಂಡ ವರ್ಷಗಳಿಗೆ ಮಂಜೂರಾದ ವರ್ಷಾವಾರು ವಿಮೆ ಮೊತ್ತ ಎಷ್ಟು;

ಇ) ಪ್ರತ್ಯೇಕ ಬೆಳೆಯ ಪ್ರಕಾರ ಮಂಜೂರಾದ ಮೊತ್ತದಲ್ಲಿ ರಾಜ್ಯದ ಹಣವೆಷ್ಟು (ವರ್ಷಾವಾರು ವಿವರ ನೀಡುವುದು):

ಶ್ರೀ ಕೆ. ಶ್ರೀನಿವಾಸ ಗೌಡ (ಕೃಷಿ ಸಚಿವರು)

ಅ) ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ ರೈತರು ವಿಮಾ ಕುರಿತು ಪಾವತಿಸಿ ಪಾಲ್ಗೊಂಡ ರೈತರಿಂದ ಸಂಗ್ರಹಿಸಲಾದ ವಿಮಾ ಕಂತಿನ ಮೊತ್ತ ವಾರ್ಷಿಕೆವಾರು ಈ ಕೆಳಕಂಡಂತೆ ಇದೆ:

ವರ್ಷ	ವಿಮಾ ಕಂತಿನ ಮೊತ್ತ (ರೂ. ಲಕ್ಷಗಳಲ್ಲಿ)
2001–02	1575.72
2002–03	4192.00
2003–04	4392.64
ಒಟ್ಟು	10160.36

ಆ) ವಾರ್ಷಿಕವಾರು ಯೋಜನೆಯಡಿ ರೈತರಿಗೆ ಇತ್ಯರ್ಥಪಡಿಸಲಾಗದ ಬೆಳೆ ವಿಮಾ ನಷ್ಟ ಪರಿಹಾರ ಮೊತ್ತ ಈ ಕೆಳಕಂಡಂತೆ ಇದೆ.

ವರ್ಷ	ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ. ಗಳಲ್ಲಿ)
2001–02	13612.29
2002–03	29499.91
2003–04	27231.75
*(ಮುಂಗಾರು 2003)	
ಒಟ್ಟು	70343.95

*2003ರ ಮುಂಗಾರು ಹಂಗಾಮಿನ ಹತ್ತಿ ಬೆಳೆಯ ಹಾಗೂ 2003–04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ವಿವಿಧ ಬೆಳೆಗಳ ಬೆಳೆ ವಿಮಾ ನಷ್ಟ ಪರಿಹಾರ ಒಟ್ಟು ಮೊತ್ತದಲ್ಲಿ ರಾಜ್ಯ ಸರ್ಕಾರದ ಪಾಲನ್ನು ಬಿಡುಗಡೆ ಮಾಡಲು ದಿನಾಂಕ 3–1–2005 ಭಾರತೀಯ ಕೃಷಿ ವಿಮಾ ಕಂಪನಿ ಸಂಸ್ಥೆಯು ರಾಜ್ಯ

ಸರ್ಕಾರವನ್ನು ಕೋರುತ್ತದೆ. ರಾಜ್ಯ ಸರ್ಕಾರದ ಪಾಲು ಬಿಡುಗಡೆ ಮಾಡಲು ದಿನಾಂಕ 3–1–2005 ಭಾರತೀಯ ಕೃಷಿ ವಿಮಾ ಕಂಪನಿ ಸಂಸ್ಥೆಯು ರಾಜ್ಯ ಸರ್ಕಾರವನ್ನು ಕೋರುತ್ತದೆ. ರಾಜ್ಯ ಸರ್ಕಾರದ ಪಾಲು ಬಿಡುಗಡೆ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ವಿಮಾ ಹಣ ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು.

ಇ) ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಲು ರಾಜ್ಯ ಸರ್ಕಾರದಿಂದ 2001–02ನೇ ಸಾಲಿನಿಂದ 2003ರ ಮುಂಗಾರು ಹಂಗಾಮಿನವರೆಗೆ ಬಿಡುಗಡೆ ಮಾಡಿರುವ ರಾಜ್ಯ ಸರ್ಕಾರದ ಪಾಲು ರೂ. 30773.00 ಲಕ್ಷಗಳು ವಿವರ ಈ ಕೆಳಕಂಡಂತೆ ಇದೆ.

ವರ್ಷ.	ಬೆಳೆ ವಿಮೆ ನಷ್ಟ ಪರಿಹಾರ ರಾಜ್ಯ ಸರ್ಕಾರದ ಪಾಲು (ಲಕ್ಷ ರೂ. ಗಳಲ್ಲಿ)
2001–02	6018.00
2002–03	12654.00
2003–04	12101.00
ಒಟ್ಟು	**30773.00**

621(214) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ (ಹುಕ್ಕೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಬ್ಬಿನ ಬೆಳೆಗೆ ಉಣ್ಣೆ ರೋಗ ತಗಲಿ ರೈತ ಅನುಭವಿಸಿದ ಹಾನಿ ಎಷ್ಟು;

ಆ) ಉಣ್ಣೆ ರೋಗ ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಉಣ್ಣೆ ರೋಗದಿಂದ ಕಬ್ಬಿನ ಇಳುವರಿ ಕಡಿಮೆಯಾಗಿ ಸಕ್ಕರೆ ಕಾರ್ಖಾನೆಗಳಿಂದ ಸರ್ಕಾರಕ್ಕೆ ಆದಾಯ ಎಷ್ಟು ಕಡಿಮೆ ಆಗಿದೆ?

ಶ್ರೀ ಶ್ರೀನಿವಾಸಗೌಡ ಕೆ. (ಕೃಷಿ ಸಚಿವರು)

ಅ) 2004–05ನೇ ಸಾಲಿನಲ್ಲಿ ರಾಜ್ಯದಲ್ಲಿ ಅಂದಾಜು 28195 ಹೆ. ಪ್ರದೇಶದಲ್ಲಿ ಕಬ್ಬಿನ ಬೆಳೆಗೆ ಬಿಳಿ ಉಣ್ಣೆ ತಗುಲಿ ಅಂದಾಜು ಶೇ. 15–20 ರಷ್ಟು ಭಾಗದಷ್ಟು ಕಬ್ಬಿನ ಬೆಳೆಯಲ್ಲಿ ಇಳುವರಿ ಕುಂಠಿತವಾಗಿರುವ ಸಂಭವವಿದೆ.

ಆ) ಕಬ್ಬಿನ ಬೆಳೆಯನ್ನು ಬಾಧಿಸುವ ಬಿಳಿ ಕೀಟದ ಬಾಧೆಯನ್ನು ಜೈವಿಕ ಹತೋಟಿ ಕ್ರಮದ ಮೂಲಕ ಅಂದರೆ ಪರಭಕ್ಷಕ ಕೀಟಗಳ ಮೂಲಕ ಯಶಸ್ವಿಯಾಗಿ ಹತೋಟಿ ಮಾಡಲು ಸಾಧ್ಯವೆನ್ನುವುದು ಸಂಶೋಧನೆಗಳಿಂದ ತಿಳಿದು ಬಂದಿರುತ್ತದೆ. ಆದುದರಿಂದ ಬಿಳಿ ಉಣ್ಣೆ ಹೇನಿನ ಹತೋಟಿಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ರೈತರಿಗೆ ಶಿಫಾರಸ್ಸು ಮಾಡಲಾಗುತ್ತಿದೆ.